ಕರೆದುತಂದಿದ್ದ... ಉಪ್ಪರಿಗೆ ಮೇಲಿನ ಸ್ಟುಡಿಯೋದ ಕೆಲವು ಸಲಕರಣೆಗಳನ್ನು ತಂದಿಟ್ಟುಕೊಂಡು, ಹಾಸಿಗೆಯನ್ನು ಅಸ್ತವ್ಯಸ್ತವಾಗಿಸಿ, ಅವಳನ್ನು ಮನವೊಲಿಸಿ ಬೆತ್ತಲಾಗಿಸಿ ಹಾಸಿಗೆಯ ಮೇಲೆ ಮಲಗಿಸಿದ್ದ. ನೆದರೊಳಗಿನ ರೇಖೆಗಳು ಕ್ಯಾನವಾಸ್ ಮೇಲೆ ಮೂಡುತ್ತಿದ್ದಂತೆ ಅವಳೊಳಗೆ ಕೊಂಚ ಶೃಂಗಾರ ಕಡಿಮೆಯಾದಂತೆನಿಸಿ, ಆ ರತಿಯೆಂಬ ಸ್ಥಾಯಿಭಾವವನ್ನು ಅವಳ ಮುಖದಲ್ಲಿ ಮೂಡಿಸಲು ಹರಸಾಹಸಪಟ್ಟು ಕಡೆಗೆ ಅಂತಃದೃಷ್ಟಿಯಲ್ಲಿನ ತನ್ನದೇ ನೆನಪಿನ ಮುಖ ಲಕ್ಷಣವೊಂದಕ್ಕೆ ತಕ್ಕುದಾದ ಬಣ್ಣ ಕೊಡುತ್ತಲಿದ್ದ... ಆಗ ವಿನಿತಾ ಬಾಗಿಲಿಗೆ ಅಡ್ಡವಾಗಿ ಬೆನ್ನ ಹಿಂದೆ ನಿಂತಿದ್ದಳು.

'ಹಾ..ಹೋ...' ಎಂದರಚುತ್ತ ಇದ್ದಬಿದ್ದುದನ್ನೆಲ್ಲ ಚೆಲ್ಲಾಡುತ್ತ ಸ್ವಾಧೀನತಪ್ಪಿದವಳಂತೆ ಕಿರುಚಾಡಿ ಹಲಾನುಲೆ ತಳಾಂಗುತದಗಿಣ ದೊಡ್ಡಾಟದ ಪಾತ್ರದಂತೆ ಒಡ್ಡೊಡ್ಡಾಗಿ ಕುಣಿಯತೊಡಗಿದಳು. ಅವನು ಬಳಿಗೆ ಬರುತ್ತಿದ್ದಂತೆ ವಿನಿತಾಳ ದೇಹವೆಲ್ಲ ಕಂಪಿಸತೊಡಗಿತು. 'ನಿನ್ನ ಅಸಹ್ಯದ ಮುಖ ನನಗೆ ತೋರಿಸಬೇಡ' ಎಂದು ಬೊಬ್ಬೆಹಾಕಿದಳು. 'ದಾರಿಮ್ಯಾಲಿನ ಒಂದು ಜುಜುಬಿ ಹೆಣ್ಣನ್ನ ಕರೆತಂದು ನಮ್ಮ ಬೆಡ್‌ರೂಮಿನ್ಯಾಗ ಬೆತ್ತಲೆ ಕೂರಿಸೋದು ಅಂದ್ರೇನು? ಕಲಾವಿದ ಅಂತ ಹೇಳ್ಕೊಂಡು ಇಂಥ ಹಾದರ ಮಾಡಾಕ ನಾಚಿಕಿ ಆಗೋದಿಲ್ಲ?' ಎಂದು ಕಿರುಚಿದಳು. ವೈರಮುಡಿ ಪೆದ್ದ ನಗೆನಕ್ಕು ಸುಮ್ಮನಾದ.

**ಹಾಂಗೆಲ್ಲ ಕೂಗಾಡೋದರಿಂದ ರಕ್ತ ಸುಟ್ಟ ಹೋಗತದ. ದಿಂಬನ್ನು ಸರಿಸಿ ಅವಳ ತಲೆಯ ನೇವರಿಸಲು ಮುಂದಾದ... ಅವಳಿಗೆ ಕಿರಿಕಿರಿ ಆಗುವುದನ್ನು ಮತ್ತೆ ತೋರಿಸಿಕೊಳ್ಳುವ ಮನಸ್ಸಾಗಲಿಲ್ಲ. ಮುಖದ ಮುಂದೆ ಹಿಡಿದ ನೀರಿನ ಲೋಟವನ್ನು ಎಡಗೈಯಿಂದ ತಳ್ಳಿದಳಷ್ಟೆ ಅದು ಕಿಡಕಿಗೆ ಬಡಿದು ಗಾಜು ಪುಡಪುಡಿಯಾಯ್ತು.**

ಸಿಟ್ಟಿನ ಭರದಲ್ಲಿ ಉದ್ವೇಗ ಹೆಚ್ಚಿದಂತೆಲ್ಲ ಉಸಿರಾಟದ ಲಯವೂ ಬದಲಾಗುತ್ತ ಮೂಗಿನಹೊಳ್ಳೆಗಳು ಏರಿಳಿಯುವುದ ನೋಡಲು ಚಂದವೋಚಂದ. ಬಿಳಿಯ ಚರ್ಮದಲ್ಲಿ ಸುಕ್ಕೇರಿದಂತೆಲ್ಲ ನಯನಾಜೂಕಿನ ಚೆಲುವೆಲ್ಲ ಮಾಯವಾಗಿ ಅಸಲಿ ಹೆಣ್ಣಿನ ಕಳೆಕಾಣುತ್ತಿತ್ತು. ಹೆರಿಸಿದ್ದರಿಂದ ಹುಬ್ಬಿನ ಓಡೂ ಹಣೆಯಲ್ಲಿನ ನೆರಿಗೆಗಂಟಿದ ಗೆರೆಯಂತೆಯೇ ಬೆರೆತಿತ್ತು. ಅವಳ ಭಾವದ ತೀವ್ರತೆಯನ್ನ ಚಿತ್ರದಲ್ಲಿ, ಬಳಸುವ ಬಣ್ಣದಲ್ಲಿ ಒಪ್ಪಮಾಡೋದು ಹ್ಯಾಗಪ್ಪಾ ಶಿವನೇ ಅಂತ ಯೋಚಿಸುತ್ತಿದ್ದವನ ಮುಖ ತಿವಿದು 'ಖರೆ ಹೇಳು ಆಕಿ ಯಾರು?' ಕೂಗಿಕೊಂಡಳು ವಿನಿತಾ. ರಪ್ಪ...ಂತ ಕೈಯೊಳಗಿದ್ದ ಸ್ಮಾರ್ಟ್‌ಫೋನ್ ನೆಲಕಚ್ಚಿ ಬಣ್ಣಬಣ್ಣದ ಚಿತ್ತಾರ ಮೂಡಿಸುತ್ತಿದ್ದ ಸ್ಕ್ರೀನ್ ಚೂರುಚೂರಾಯ್ತು. ರೇಗಾಡುತ್ತಿದ್ದವಳು ಒಮ್ಮೆಲೆ ತಡೆದು ಕೋಣೆಯ ಅಂತರಂಗದ ಅಂತಃಪುರ ಹೊಕ್ಕು ಬಿಕ್ಕಿಬಿಕ್ಕಿ ಅತ್ತಳು. ಅವಳ ಮನದಲ್ಲಿ ಕುಣಿಯುತ್ತಿದ್ದ ಸೆಡುವಿನ ಕರಡಿ ಜಿಗಿದು ಆಚೆಗೆ ಬಂದುದರಿಂದ ಮೈಯೆಲ್ಲ ಆಕ್ರೋಶ ಬಂದಂತಾಗಿ ಅಂತಃಪುರದ ಆಕಾರ ಬದಲಾಗಿ ಚಲ್ಲಾಪಿಲ್ಲಿಯಾಗಿಬಿತ್ತು. ಗೋಡೆಗೆ ತೂಗುತ್ತಿದ್ದ ಹಸೆಮನೆ ಸರಣಿಯ ಪೇಂಟಿಂಗ್‌ಗಳನ್ನು ಜಜ್ಜಿಪುಡಿಮಾಡುವ ಅನಿಸಿತು. ಕೈಕಾಲೊಳಗೆ ಶಕ್ತಿ ಸಾಲದೆನಿಸಿ ಹಾಸಿಗೆಯಲ್ಲಿ ಬಿದ್ದುಕೊಂಡು